**ಅಸಲು ದಾವ ಸಂಖ್ಯೆ: 641/2020**

**ಪಿ.ಡಬ್ಲೂ -1**

ದಿಃ 09.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎ ರವರಿಂದಃ-**

1. ನಾನು 4ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ಮರಾಠಿ ಮಾಧ್ಯಮದಲ್ಲಿ ಓದಿರುತ್ತೇನೆ. ಬರಮಾ ವೈಜು ಪಾಟೀಲ ಎಂದರೆ ನನ್ನ ತಂದೆ. ದಾವಾ ಸ್ವತ್ತು ಈಗಲೂ ಬರಮಾ ವೈಜು ಪಾಟೀಲ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಈಗ ತನ್ನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-1 ದಾಖಲೆ ಪ್ರಕಾರ ದಾವಾ ಸ್ವತ್ತು ಬರಮಾ ವೈಜು ಪಾಟೀಲ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1 ಎಕರೆ 18 ಗುಂಟೆ ಜಮೀನು ಇದ್ದು ಅದರಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪೋಡಿ ಆಗಿರುವುದಿಲ್ಲ ಎಂದರೆ ಸರಿ. ಸದರಿ 1 ಎಕರೆ 18 ಗುಂಟೆ ಜಮೀನಿನಲ್ಲಿ ಯಾವುದೇ ವಿಭಾಗ ಆಗದೇ ಇದ್ದರೂ ಸಹ 22 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನಾನು ವಾದಪತ್ರದಲ್ಲಿ ಚೆಕ್ಕುಬಂದಿ ತೋರಿಸಿರುವುದು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ 1 ಎಕರೆ 18 ಗುಂಟೆ ಜಮೀನಿನಲ್ಲಿ ವಿಭಾಗ ಆಗಿದೆ ಎಂದು ತೋರಿಸಲು ನನ್ನ ಬಳಿ ಸಾಕ್ಷಾಧಾರ ಇರುವುದಿಲ್ಲ. ಬರಮಾ ವೈಜು ಪಾಟೀಲ ರವರು 2014 ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಬರಮಾ ವೈಜು ಪಾಟೀಲ ರವರು ಅವರ ಜೀವಿತ ಕಾಲದಲ್ಲಿ ಜಮೀನಿನ ಸಂಬಂಧವಾಗಿ ಯಾವುದಾದರೂ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

2. ಪ್ರತಿವಾದಿಯು ನನ್ನ ಸಂಬಂಧಿಕನಾಗಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೊದಲು ಸರ್ವೆ ನಂಬರ 73/2 ಆಗಿದ್ದು ಈಗ 73/10 ಆಗಿರುತ್ತದೆ ಎಂದರೆ ಸರಿ.

ದಿಃ28.08.2007 ರಂದು ಸರ್ವೆ ನಂಬರ 73/2 ರಲ್ಲಿ 1 ಎಕರೆ 5 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನನ್ನ ತಂದೆಯವರು ಪ್ರತಿವಾದಿಯ ಹೆಸರಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರದ ಸಮಯದಲ್ಲಿ ನನ್ನ ತಂದೆಯವರು ಮುಂಗಡ ಹಣವಾಗಿ ರೂ.1,10,000/- ಹಣವನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರವನ್ನು ಜಿಲ್ಲಾ ಬಾಂಡ್ ರೈಟರ್ ರವರು ಬರೆದಿದ್ದು ಸದರಿ ದಾಖಲೆಗೆ ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ28-08-2007 ರಿಂದ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮಾಡಿದ ವ್ಯವಹಾರವನ್ನು ಹಾಗೂ ಅವರು ಪಡೆದ ಹಣಕ್ಕೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಜಮೀನಿನ ಕಬ್ಜೆ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ 6 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. 2014 ರಲ್ಲಿ ನಮ್ಮ ತಂದೆ ಮರಣ ಹೊಂದಿದ ನಂತರ ಅವರ ವಾರಸುದಾರರಾದ ನಾನು ಹಾಗೂ ನನ್ನ ಸಹೋದರ ಸಹೋದರಿಯರ ಹೆಸರುಗಳು ದಾವಾ ಸ್ವತ್ತಿನ ಉತಾರದಲ್ಲಿ ಬಂದಿರುತ್ತದೆ. ಯಾವ ಇಸವಿಯಲ್ಲಿ ನಾವು ಆ ರೀತಿ ಹೆಸರುಗಳನ್ನು ಉತಾರದಲ್ಲಿ ಹಾಕಲು ಅರ್ಜಿ ನೀಡಿದೆವು ಹಾಗೂ ಯಾವಾಗ ಮ್ಯುಟೇಶನ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-1 ರಲ್ಲಿ ನಮ್ಮ ತಂದೆಯ ಹೆಸರು ಇರುವುದು ಸುಳ್ಳು ಇರುತ್ತದೆ.

3. ವಿದ್ಯಾ ಸುದಾಕರ ಪಾಟೀಲ ಎಂದರೆ ನನ್ನ ಸೊಸೆ ಆಗಿರುತ್ತಾರೆ. ಈಗ ಆಕೆಯ ವಯಸ್ಸು 40 ವರ್ಷ ಇರಬಹುದು ಎಂದರೆ ಸರಿ. ಆಕೆಗೆ ನನ್ನ ತಂದೆ ಹಾಗೂ ಪ್ರತಿವಾದಿಯ ನಡುವೆ ಆದ ವ್ಯವಹಾರದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಆರ್ ಎಸ್ ನಂಬರ

73/10 ರಲ್ಲಿ 22 ಗುಂಟೆ ಇರುತ್ತದೆ ಎಂದು ಸುಳ್ಳು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲವಾಗಲಿ ಎಂದು ನಾನು ಪ್ರತಿವಾದಿಗೆ ನನ್ನ ದಾವಾ ಸ್ವತ್ತಿನ ಸ್ವಾಧೀನಕ್ಕೆ ತಕರಾರು ಮಾಡುತ್ತಿರುತ್ತಾರೆ ಎಂದು ಸುಳ್ಳು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿಗೆ ಮಾಡಿಕೊಟ್ಟಿರುವ ಕರಾರು ಪತ್ರದ ಅನುಸಾರ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಮಾರ್ಚ 2024 ರಲ್ಲಿ ನನ್ನ ಹಾಗೂ ಪ್ರತಿವಾದಿಯ ನಡುವೆ ಒಂದು ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಕರಾರು ಪತ್ರದ ಪ್ರಕಾರ ನಾನು ಪ್ರತಿವಾದಿಯಿಂದ ರೂ.2,50,000/- ಹಣವನ್ನು ಪಡೆದಿರುತ್ತೇನೆ ಎಂದರೆ ಸಾಕ್ಷಿಯು ತಾನು ಕೇವಲ ರೂ.2,00,000/- ಹಣವನ್ನು ಪಡೆದಿರುವುದಾಗಿ ನುಡಿಯುತ್ತಾರೆ. ಸದರಿ ಕರಾರು ಪತ್ರದ ಅನುಸಾರ ನಾನು ಸ್ವತ್ತಿನ ಮಾಲೀಕನಾಗಿ 11ಇ ನಕಾಶೆಯನ್ನು ಮಾಡಿಸಿ ಸ್ವತ್ತನ್ನು ಪ್ರತಿವಾದಿಗೆ ಕ್ರಯಕ್ಕೆ ಕೊಡಬೇಕೆಂದು ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಯೇ 11ಇ ನಕ್ಷೆಯನ್ನು ಮಾಡಿಕೊಳ್ಳಬೇಕು ಎಂದು ನುಡಿಯುತ್ತಾರೆ. 11ಇ ನಕ್ಷೆಯನ್ನು ಮಾಡಲು ಸ್ವತ್ತಿನ ಮಾಲೀಕರೆ ಅರ್ಜಿ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ. ಮಾರ್ಚ ನಿಂದ ಇಲ್ಲಿಯವರೆಗೆ ನಾನು 11ಇ ನಕ್ಷೆ ಮಾಡಲು ಯಾವುದೇ ಅರ್ಜಿ ನೀಡಿರುವುದಿಲ್ಲ. ನಾನು ಪ್ರತಿವಾದಿಯಿಂದ ಹಣವನ್ನು ಪಡೆದು ಈಗ ಜಮೀನು ನನ್ನ ಕಬ್ಜೆಯಲ್ಲಿ ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ನಮೂದು ಮಾಡಿದಂತೆ ದಾವಾ ಆಸ್ತಿಯು ಅದೇ ಸ್ಥಿತಿಯಲ್ಲಿ ಜಾಗದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪೋಟೋಗಳಲ್ಲಿ ಕಾಣುತ್ತಿರುವ ಬೆಳೆಯು ಪ್ರತಿವಾದಿ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಆಲೂಗಡ್ಡೆ ಹಾಗೂ ಗೆಣಸು ಬೆಳೆಯಲಾಗುತ್ತದೆ ಎಂದರೆ ಸರಿ. ಸದರಿ ಬೆಳೆಗಳನ್ನು ನಾನು ಬೆಳೆಯುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ಸಾಕ್ಷಿ ಇದೆ. ನನ್ನ ತಂದೆಯ ವಾರಸುದಾರರಾದ

ನನ್ನ ಸಹೋದರ ಸಹೋದರಿಯರು ಪ್ರಸ್ತುತ ದಾವೆ ಹೂಡಲು ನನಗೆ ಅಧಿಕಾರ ಪತ್ರ ಕೊಟ್ಟಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**